ಶ್ರೀ ಎಸ್. ಆರ್. ಬೊಮ್ಮಾಯಿ.--ಪ್ರಪರ್ ಮಿನಿಸ್ಟರ್‌ರವರು ಬರುತ್ತಾರೆ. ಅವರೇ ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು.--ಮಂತ್ರಿಗಳು ಬಂದ ತಕ್ಷಣ ನಿಮಗೆ ಉತ್ತರ ಕೊಡಿಸುತ್ತೇನೆ.

## ರಾಜ್ಯದಲ್ಲಿ ಜಿಲ್ಲಾ ರಿಜಿಸ್ಟ್ರಾರ್‌ರವರ ಹುದ್ದೆಗೆ ಭಡ್ತಿ ನೀಡುವ ಬಗ್ಗೆ

೩೬೨. ಶ್ರೀ ಬಿ. ಸ್ವಾಮಿರಾವ್, (ಹೊಸನಗರ).--ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಜಿಲ್ಲಾ ರಿಜಿಸ್ಟ್ರಾರ್‌ರವರ ಹುದ್ದೆಗೆ ಬಡ್ತಿ ಯಾವಾಗ ನೀಡಲಾಗುವುದು.

ಆ) ಎಷ್ಟು ಕಾಲದಿಂದ ಬಡ್ತಿ ನೀಡದೆ ತಡೆ ಹಿಡಿಯಲಾಗಿದೆ.

ಇ) ಬಡ್ತಿ ಪಡೆಯಬೇಕಾದವರ ಸಂಖ್ಯೆ ಎಷ್ಟು ?

ಈ) ಯಾವ ಕಾರಣದಿಂದ ಬಡ್ತಿ ಜಾರಿಗೆ ಕೊಟ್ಟಿರುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).--

ಅ) ಆ),ಇ), ಮತ್ತು ಈ) ಈ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಸ್ವಾಮಿರಾವ್.--ಮಾನ್ಯ ಅಧ್ಯಕ್ಷರೆ. ಈ ಉತ್ತರ ಅಷ್ಟು ಒಳ್ಳೆಯದಲ್ಲ. 'ಪರಿಶೀಲಿಸುತ್ತೇನೆ' 'ನೋಡುತ್ತೇನೆ' 'ಉದ್ಭವಿಸುವುದಿಲ್ಲ' ಎಂದು ಹೇಳಿದರೆ ಅದಕ್ಕೆ ಅರ್ಥವಿಲ್ಲ. ಏಕೆಂದರೆ ಬಹಳ ಜನ ನೌಕರರು ತಮಗೆ ಬರತಕ್ಕಂಥ ಬಡ್ತಿ ಇಲ್ಲದೇಹೋದರೆ ಅವರು ಕೆಲಸ ಮಾಡುವುದಿಲ್ಲ, ಹಲವಾರು ವರ್ಷಗಳಿಂದ ಬಹುಶಃ ಹೆಚ್ಚೂ ಜನತಾ ಸರ್ಕಾರ ಬಂದಾಗಿನಿಂದ ಅವರಿಗೆ ಬಡ್ತಿ ಕೊಟ್ಟಿಲ್ಲ. ಆದ್ದರಿಂದ ಇದನ್ನು ಯಾವಾಗ ಪರಿಶೀಲನೆ ಮಾಡುತ್ತೀರಿ?

ಶ್ರೀ ಎಂ. ಪಿ. ಪ್ರಕಾಶ್.--ಸನ್ಮಾನ್ಯ ಅಧ್ಯಕ್ಷರೆ ೨೦-೨-೧೯೮೯ರಂದು ಪದೋನ್ನತಿಗೆ ಬೇಕಾಗಿರತಕ್ಕಂಥ ಜೇಷ್ಟತಾ ಪತ್ರದ ಯಾದಿಯನ್ನು ಈಗಾಗಲೇ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟ ಮಾಡಲಾಗಿದೆ. ಇಲ್ಲಿ ಹುಂದಗೋಲದಲ್ಲಿ ಮೂಲದಲ್ಲಿ ಕೇವಲ ೨೫ ಇದ್ದದ್ದರಿಂದ ಎರವಲು ಸೇವೆ ಆಧಾರದ ಮೇಲೆ ಇರತಕ್ಕ ೧೧ ಅಧಿಕಾರಿಗಳಿಗೆ ಪದೋನ್ನತಿ ಕೊಡತಕ್ಕಂಥ ವಿಷಯದಲ್ಲಿ ನ್ಯಾಯಾಲಯಗಳ ತಕರಾರು ಇದ್ದಿದ್ದರಿಂದ ಸ್ವಲ್ಪಮಟ್ಟಿಗೆ ವಿಳಂಬವಾಗಿದ್ದು ನಿಜ. ಆದರೆ ಈಗ ೨೦-೨-೮೯ರಂದು ಜ್ಯೇಷ್ಠತಾ ಯಾದಿಯನ್ನು ಈಗಾಗಲೇ ರಾಜ್ಯ ಪತ್ರದಲ್ಲಿ ಬಿಡುಗಡೆಮಾಡಲಾಗಿದೆ ಈಗ ಬೇರೆ ಬೇರೆ ಇಲಾಖೆಗಳ ಜೊತೆಗೆ ಉಪನಿಬಂಧನೆಗಳನ್ನು ಮಾಡಬೇಕಾಗಿರತಕ್ಕಂಥಾದ್ದು ಇರುವುದರಿಂದ ಎನ್‌ಕ್ಯಾಡರ್ ಪೋಸ್ಟ್ ಎಂದು ಕರೆಯಿಸಿತ್ತಿರುವುದರಿಂದ ಮೂಲದಲ್ಲಿ ಕೇವಲ ೨೫ ಇದ್ದಿದ್ದರಿಂದ ತೊಂದರೆಯಾಗಿದೆ. ಪ್ರಾಯಶಃ ಒಂದು ತಿಂಗಳೊಳಗಾಗಿ ಇದನ್ನು ಎಲ್ಲವೂ ಸಮರ್ಪಕವಾಗಿ ಬಗೆಹರಿಯುತ್ತದೆ.

ಅಧ್ಯಕ್ಷರು.--ಗುರುಪ್ರಸಾದ್‌ರವರೆ ತಮ್ಮ ಪ್ರಶ್ನೆ ೫೮೫ಕ್ಕೆ ಒಂದು ತಿಂಗಳು ಕಾಲಾವಕಾಶ ಕೇಳಿದ್ದಾರೆ. ಆಮೇಲೆ ಕೊಡಿಸುತ್ತೇನೆ.

## ರಾಶಿಂಗ್ ಮತ್ತು ಬೋರಗಲ್ ಕೆರೆ ನಿರ್ಮಾಣ

೩೬೬. ಶ್ರೀ ಮಲ್ಲಾರಿಗೌಡ, ಎಸ್. ಪಾಟೀಲ್ (ಸಂಕೇಶ್ವರ).--ಮಾನ್ಯ ಮುಖ್ಯ ಮಂತ್ರಿಗಳೆ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಶಿಂಗ್ ಮತ್ತು ಬೋರಗಲ್ ಕೆರೆಗಳ ನಿರ್ಮಾಣದ ಬಗ್ಗೆ ಬೇಕಾದ ಜಮೀನು ಸ್ವಾಧೀನದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ?

ಆ) ಈ ವಿಳಂಬದಿಂದಾಗಿ ರೈತರಿಗೆ ಹಾಗೂ ದನಕರುಗಳಿಗೆ ತೊಂದರೆ ಇರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಇ) ಹಾಗಿದ್ದಲ್ಲಿ, ನಿರ್ಮಾಣವನ್ನು ಯಾವಾಗ ಪ್ರಾರಂಭಿಸಲಾಗುವುದು ?